ಶ್ರೀ ಎಸ್.ಜಿ. ನಂಜಯ್ಯನ ಪಂಥ.—ಇದು ಸರ್ಕಾರಕ್ಕೆ ಮೋಸ ಮಾಡಿದ್ದಲ್ಲ, ದೇವರಿಗೆ ಮೋಸ ಮಾಡಿದ್ದು ದ್ದು.

(ಗದ್ದಲ)

೩) ತಿಪಟೂರು ತಾಲ್ಲೂಕಿನ ಬೈರಾಪುರದ ಮುಜರಾಯಿಗೆ ಸೇರಿದ ಶ್ರೀ ಕಲ್ಲಾಳಮ್ಮ ದೇವರ ಬಂಗಾರದ ಒಡವೆಗಳನ್ನು ತಾಮ್ರದ ನಕಲಿ ಒಡವೆಗಳನ್ನಾಗಿ ಪರಿವರ್ತಿಸಿರುವುದು

೧೨–೩೦ ಪಿ. ಎಂ.

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯ್ಕನಹಳ್ಳಿ).—ಮಾನ್ಯ ಅಧ್ಯಕ್ಷರೇ, ಕನ್ವೀನರ್ ಕೈಬಿಟ್ಟಲ್ಲಿ ತಿಪಟೂರು ತಾಲ್ಲೂಕು ಕಿಬ್ಬನಹಳ್ಳಿ ಹೋಬಳಿ ಬೈರಾಪುರದ ಮುಜರಾಯಿಗೆ ಸೇರಿದ ಶ್ರೀ ಕಲ್ಲಾಳಮ್ಮ ದೇವರ ಸುಮಾರು ಎರಡೂವರೆ ಲಕ್ಷದ ಬೆಲೆ ಬಾಳುವ ಬಂಗಾರದ ಒಡವೆಗಳನ್ನು ತಾಮ್ರದ ನಕಲೀ ಒಡವೆಗಳಾಗಿ ಮಾರ್ಪಡಿಸಿರುವ ಬಗ್ಗೆ ಮಾನ್ಯ ಧಾರ್ಮಿಕ ದತ್ತಿ ರಾಜ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಕೆ. ಆಮರನಾಥಶೆಟ್ಟಿ (ಮುಜರಾಯಿ ಸಚಿವರು).—ತಿಪಟೂರಿನ ತಾಲ್ಲೂಕಿನ ಕಿಬ್ಬನ ಹಳ್ಳಿ ಹೋಬಳಿ ಬೈರಾಪುರದ ಶ್ರೀ ಕಲ್ಲಾಳಮ್ಮ ದೇವಸ್ಥಾನಕ್ಕೆ ಸೇರಿದಂತೆ ಒಟ್ಟು ೮೯ ಬೆಳ್ಳಿ ಬಂಗಾರದ ಒಡವೆಗಳಿರುತ್ತವೆ. ಇದರಲ್ಲಿ ೪೨ ಬೆಳ್ಳಿ ಆಭರಣಗಳು, ೪೭ ಬಂಗಾರದ ಒಡವೆಗಳಾಗಿರುತ್ತವೆ. ಈ ಬಗ್ಗೆ ಬಂದ ದೂರನ್ನು ಪರಿಶೀಲಿಸಲು ತಹಶೀಲ್ದಾರರಿಗೆ ಆದೇಶ ನೀಡಲಾಗಿತ್ತು. ತಹಶೀಲ್ದಾರರು ಸಂಬಂಧಪಟ್ಟವರಿಗೆ ೪ ಸಲ ನೋಟೀಸ್ ಜಾರಿ ಮಾಡಿದರೂ ಕಾರಣಾಂತರಗಳಿಂದ ಅವರು ಹಾಜರಾಗಿರಲಿಲ್ಲ. ಅಂತಿಮವಾಗಿ ದಿನಾಂಕ ೭–೫–೮೮ ರಂದು ಕನ್ವೀನರು ಹಾಜರಾಗಿದ್ದು ಆ ದಿನ ತಹಶೀಲ್ದಾರರು ಕನ್ವೀನರ್‌ರೊಡನೆ ದೇವಸ್ಥಾನಕ್ಕೆ ಭೇಟಿ ಇತ್ತು ಪರಿಶೀಲನೆ ಮಾಡಿರುತ್ತಾರೆ. ಪರಿಶೀಲನೆಯಿಂದ ಕೆಲವು ಬೆಳ್ಳಿ ಹಾಗೂ ಬಂಗಾರದ ಒಡವೆಗಳು ಕಾಣೆಯಾಗಿರುವುದಾಗಿಯೂ ಇನ್ನಿತರ ಕೆಲವುಗಳು ನಕಲಿ ಇರುವುದಾಗಿಯೂ ಹಾಗೂ ಕೆಲವು ಆಭರಣಗಳು ತೂಕದಲ್ಲಿ ವ್ಯತ್ಯಾಸ ಕಂಡುಬಂದಿರುವುದಾಗಿ ತಿಳಿಸಿರುತ್ತಾರೆ. ಈ ಬಗ್ಗೆ ಇನ್ನೂ ಹೆಚ್ಚಿನ ತನಿಖೆ ನಡೆಸಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಲಾಗುವುದು. ಈಗಾಗಲೇ ತಹಶೀಲ್ದಾರರು ಸಂಬಂಧಪಟ್ಟ ಎಲ್ಲರಿಗೂ ಸಮಜಾಯಿಷಿ ಕೇಳಿ ನೋಟೀಸ್ ಜಾರಿ ಮಾಡಿದ್ದಾರೆ. ಈ ಬಗ್ಗೆ ವಿಚಾರಣೆಯನ್ನು ದಿನಾಂಕ ೨೩–೫–೧೯೮೮ ಕ್ಕೆ ಗೊತ್ತುಪಡಿಸಲಾಗಿದೆ.

ವಿವರಗಳು

ಅ) ಕಾಣೆಯಾಗಿರುವ ಬಂಗಾರದ ಒಡವೆಗಳು ಮತ್ತು ಅವುಗಳ ತೂಕ

			ರೂ.	ಪೈ.
೧) ಒಂದು ಬಂಗಾರದ ಗುಂಡಿನ ಸರ	—	ತೂಕ	೨ —	೦
೨) ೧೧ ಬಂಗಾರದ ಚೌಲಿಕಟ್ಟು (ದೊಡ್ಡವು)	—	ತೂಕ	ನಿಗದಿಪಡಿಸಿಲ್ಲ	
೩) ೪ ಬಂಗಾರದ ಬಾವಲಿಗಳು (ಅರಗು ಸಮೇತ)	—	ತೂಕ	೧ —	೦
೪) ಒಂದು ಬಂಗಾರದ ಚೌಲಿ ಬೆಳ್ಳಿಯ ಕಾಲು (ಅಂಗು ಸೇರಿ)	—	ತೂಕ	೩ —	೦
೫) ಬಂಗಾರದ ಕರ್ಣಜ್ವಾಲೆ ಬೆಳ್ಳಿಯ ತಗಡು (ಅರಗು ಸಮೇತ)	—	ತೂಕ	೧ —	೧೦
೬) ನಾಲ್ಕು ಬಂಗಾರದ ಕಣ್ಣು ಕಂಕಣ	—	ತೂಕ	೨ —	೦
೭) ಬಂಗಾರದ ಕರ್ಣಜ್ವಾಲೆ ತಾಮ್ರದ ತಗಡು	—	ತೂಕ	೧೫ —	೦
೮) ಚಿಕ್ಕಮ್ಮ ಮೆರವಣಿಗೆ ವಿಗ್ರಹದ ಬಂಗಾರದ ಒಂದೆಳೆ ಗುಂಡಿನ ಸರ, ತಾಳಿ ಸರ, ಒಂದು ಬಂಗಾರದ ಚಂದ್ರನೆಲೆ, ಒಂದು ಮೂಗುತಿ	—	ತೂಕ	೭ —	೦

ಬ) ನಕಲಿ ಬಂಗಾರದ ಒಡವೆಗಳು

೧)	೪ ಬಂಗಾರದ ಛತ್ರಿಗಳ ಪೈಕಿ	೪ ನಕಲಿ
೨)	೧೭ ದೊಡ್ಡ ಚೌಲಿ ಕಟ್ಟುಗಳ ಪೈಕಿ	೮ ನಕಲಿ
೩)	೯ ಚಿಕ್ಕ ಚೌಲಿ ಕಟ್ಟುಗಳ ಪೈಕಿ	೨ ನಕಲಿ
೪)	೪ ಬಂಗಾರದ ಕೋರೆ ಮೀಸೆ	೪ ನಕಲಿ
೫)	೨ ಬಂಗಾರದ ಬಿಂಡೋಲೆ ೨ ಕೆನ್ನೆ ಜೈನು	೨ + ೨

ಕ. ಬಂಗಾರದ ಒಡವೆಗಳ ತೂಕದಲ್ಲಿ ವ್ಯತ್ಯಾಸ

		ಒಡವೆಗಳ ತೂಕ ಇರಬೇಕಾದ್ದು		ಈಗ ಇರುವುದ	
		ರೂ.	ಅ.	ರೂ.	ಅ.
೧.	ಬಂಗಾರದ ಹಡ್ಡಿಕೆ	೩	೨	೧	೧೦
೨.	೨ ಬಂಗಾರದ ಗಿಳಿ	೩	೫	೩	೪
೩.	೨ ಬಂಗಾರದ ಕುಚ್ಚು ಗೆಜ್ಜೆ ಮತ್ತು ಗುಂಡು ಸೇರಿ ಅರಗು ಸಮೇತ	೬	೪	೫	೨
೪.	ಬಂಗಾರದ ತಾಳಿ ಮತ್ತು ಗುಂಡಿನ ಸರ ಅರಗು ಸಮೇತ	೮	೦	೫	೧೨

೨) ಬೆಳ್ಳಿ ಒಡವೆಗಳ ತೂಕದ ವ್ಯತ್ಯಾಸ

		ಒಡವೆಗಳ ತೂಕ ಇರಬೇಕಾದ್ದು		ಈಗ ಇರುವುದು	
		ರೂ.	ಅ.	ರೂ.	ಅ.
೧.	೨ ಬೆಳ್ಳಿಯ ಸೋಮನ ಡಾಬುಗಳು	೨೨	೦	೧೧	೦
೨.	ಒಂದು ಬೆಳ್ಳಿಯ ಗೆಜ್ಜೆ ಡಾಬು ೨ ಸಣ್ಣವು	೨೮	೦	೫	೦
೩.	ಬೆಳ್ಳಿಯ ಪಶ್ಕೈವು ೧೭ ಕೋಲು ಸಮೇತ	೨೪	೦	೧೩	೦
೪.	ಬೆಳ್ಳಿಯ ಬಡಿಗಳು ೪	೩೦	೦	೨೮	೮
೫.	ಬೆಳ್ಳಿಯ ತೋಲು ಬಂದಿಗಳು	೧೨	೦	೪	೮
೬.	೩ ಬೆಳ್ಳಿಯ ಗಿಳಿಗಳು ಕೋಲು ಸಮೇತ	೧೧	೦	೧	೦

೩) ನಾಪತ್ತೆಯಾದ ಬೆಳ್ಳಿಯ ಒಡವೆಗಳು

೧.	೬ ಬೆಳ್ಳಿಯ ಮುರಿಗಳು	— ತೂಕ	೩೦	೦
೨.	೩ ಬೆಳ್ಳಿಯ ಜೆಡೆ ಹೂಗಳು ಹಿಂಭಾಗಕ್ಕೆ ತಾಮ್ರದ ಅರಗು ತಗಜು	— ತೂಕ	೯	೦
೩.	೨ ಬೆಳ್ಳಿಯ ದಾರಗಳು	— ತೂಕ	೪	೦
೪.	೧ ಬೆಳ್ಳಿಯ ನೆರಿಗೆ ಗೆಜ್ಜೆ ಸೇರಿ	— ತೂಕ	೨೩	೪
೫.	ಬೆಳ್ಳಿಯ ನಾಗಾಭರಣ	— ತೂಕ	೫	೦

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ದೇವರುಗಳೇ ತೊಂದರೆಯಲ್ಲಿದ್ದಾರೆ.

ಶ್ರೀ ಎಸ್. ಜಿ. ಸಂಜಯ್ಯನವರ್.—ಜನತಾ ಸರಕಾರದಲ್ಲಿ ದೇವರ ಪರಿಸ್ಥಿತಿ ಹೀಗಿದೆ.

ಶ್ರೀ ಬಿ. ಲಕ್ಕಪ್ಪ.—ಹೀಗಾದರೆ ಕರ್ನಾಟಕ ರಾಜ್ಯದಲ್ಲಿನ ಮುಜರಾಯಿ ಇಲಾಖೆಗೆ ಸೇರಿದಂತಹ ದೇವಸ್ಥಾನಗಳು ಬಹುಶಃ ಯಾವುವೂ ಉಳಿಯಲುವುದಿಲ್ಲ, ದೇವರೂ ಕೂಡ ಉಳಿಯಲುವುದಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು.—ಡಿಬೇಟ್ ಬೇಡ, ಸಚಿವರು ಏನು ಉತ್ತರ ಕೊಟ್ಟಿದ್ದಾರೆ ಆ ಉತ್ತರದ ಬಗ್ಗೆ ವಿವರಣೆ ಕೇಳಿ. ನೀವು ಭಾಷಣ ಮಾಡುತ್ತಿದ್ದೀರಿ ನಾನು ಅದಕ್ಕೆ ಅವಕಾಶ ಕೊಡುವುದಿಲ್ಲ. ನಿಮಗೆ ಭಾಷಣವೆಂದರೆ ಏನು ಅಂತ ಗೊತ್ತಿಲ್ಲ, ವಿವರಣೆ ಎಂದರೆ ಏನು ಅಂತ ಗೊತ್ತಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಪ್ರಶ್ನೆ ಹೇಗೆ ಕೇಳಬೇಕು ಎಂಬುದನ್ನು ಪ್ರಿಂಟ್ ಮಾಡಿ ಕಳಿಸಿ. ರೂಲ್ಸ್ ಅನ್ನು ಚೇಂಜ್ ಮಾಡಿ.

ಅಧ್ಯಕ್ಷರು.—ನೀವು ಅವರನ್ನು ಡಿಫೈನ್ ಮಾಡುವುದು ಬೇಡ ತಮಗೆ ಎಲ್ಲವೂ ಗೊತ್ತಿದೆ.

ಶ್ರೀ ಎಸ್. ಬಂಗಾರಪ್ಪ.—ಸತ್ಯ ಹೊರಕ್ಕೆ ಬರಬೇಕೆನ್ನುವುದು ಮಾನ್ಯ ಸದಸ್ಯರ ಅನಿಸಿಕೆಯಾಗಿದೆ. ಅದು ನಮ್ಮ ಆದ್ಯ ಕರ್ತವ್ಯ.

ಅಧ್ಯಕ್ಷರು.—ಅದಕ್ಕೆ ಸಂಬಂಧಪಟ್ಟಿದ್ದನ್ನು ಕೇಳಿ.

ಶ್ರೀ ಬಿ. ಲಕ್ಕಪ್ಪ.—ಇದು ಮುಜರಾಯಿ ಇಲಾಖೆಗೆ ಸಂಬಂಧ ಪಡುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾವುದು ಯಾವುದಕ್ಕೆ ಸಂಬಂಧ ಇದೆ ಎಂಬುದನ್ನು ತಿಳಿದುಕೊಳ್ಳದೆ ಮಾತನಾಡಬಾರದು.

ಅಧ್ಯಕ್ಷರು.—ನೀವು ಹಾದಿ ಬಿಟ್ಟು ಮಾತನಾಡುವುದಿಲ್ಲ ನನಗೆ ಗೊತ್ತುಂಟು.

ಶ್ರೀ ಬಿ. ಲಕ್ಕಪ್ಪ.—ಕಾನೂನು ಪ್ರಕಾರ ದೇವಸ್ಥಾನಗಳು ಮುಜರಾಯಿ ಇಲಾಖೆಗೆ ಒಳಪಟ್ಟಿರುವುದರಿಂದ ಅದರಲ್ಲಿರತಕ್ಕಂತಹ ಒಡವೆ ವಸ್ತುಗಳು ಏನು ಇರುತ್ತವೆ ಅವು ಮುಜರಾಯಿ ಇಲಾಖೆಯ ಅಧಿಕಾರಿಗಳ ಸುಪರ್ದಿಗೆ ಕೊಡತಕ್ಕಂತಹ ವ್ಯವಸ್ಥೆಯಿದೆ. ಆದರೆ ಕನ್ವೀನರ್ ಕೈಯಲ್ಲಿ ೩೦ ವರ್ಷಗಳ ಕಾಲದಿಂದ ಒಡನೆ ವಸ್ತುಗಳನ್ನು ಬಿಡುವುದಕ್ಕೆ ಕಾರಣವೇನು? ಯಾವ ಕಾನೂನಿನ ಕೆಳಗೆ ಕನ್ವೀನರ್ ಕೈಗೆ ಕೊಟ್ಟಿದ್ದಾರೆ? ಸುಮಾರು ವರ್ಷಗಳಿಂದ ಕನ್ವೀನರ್ ಕೈಯಲ್ಲಿ ಇದೆ. ಒಬ್ಬ ಕನ್ವೀನರ್ ಕೈಯಿಂದ ಮತ್ತೊಬ್ಬ ಕನ್ವೀನರ್ ಕೈಗೆ ಅಧಿಕಾರವನ್ನು ಕೊಡತಕ್ಕಂತಹ ಕಾಲದಲ್ಲಿ ಅಧಿಕಾರಿಗಳು ಇವುಗಳನ್ನು ಸರಿಯಾಗಿ ಪರಿಶೀಲನೆ ಮಾಡಿರಲಿಲ್ಲವೇ ? ೨,೧೪,೦೦೦ ರೂಪಾಯಿ ಬೆಲೆ ಬಾಳುವ ಬಂಗಾರದ ಒಡವೆಗಳು ನಷ್ಟವಾಗಿದೆ. ಈ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕು. ಕನ್ವೀನರ್ ಕೈಯಲ್ಲಿ ಇದನ್ನು ಕೊಡುವುದಕ್ಕೆ ಕಾರಣವೇನು?

ಶ್ರೀ ಡಿ. ಟಿ. ಜಯಕುಮಾರ್ —ದೇವರಿಗೇ ಆದನ್ನು ಕಾಪಾಡಿಕೊಳ್ಳುವ ಶಕ್ತಿಯಿಲ್ಲವೇ? ಕಳ್ಳರು ದೇವಸ್ಥಾನಕ್ಕೆ ಬಂದು ಕದ್ದುಕೊಂಡು ಹೋಗುತ್ತಿದ್ದಾರೆ. ದೇವರು ತನ್ನನ್ನು ತಾನು ಕಾಪಾಡಿ ಕೊಳ್ಳುವುದಕ್ಕಾಗುವುದಿಲ್ಲವೇ ?

ಶ್ರೀ ಎಸ್. ಬಂಗಾರಪ್ಪ —ನಮ್ಮ ಸರಕಾರ ಇರುವವರೆಗೆ ದೇವರಿಗೆ ಶಕ್ತಿಯಿತ್ತು ಆದರೆ ನಿಮ್ಮ ಸರಕಾರ ಯಾವಾಗ ಬಂತೋ ಆಗ ಅದೂ ಕೂಡ ನಿಶ್ಯಕ್ತವಾಗಿ ಕುಳಿತುಕೊಂಡಿದೆ. ಇನ್ನು ಸ್ವಲ್ಪ ದಿವಸ ಅದರ ಕೈ ಕಾಲೂ ಆಡಿಸುವುದಕ್ಕೂ ಬರುವುದಿಲ್ಲ.

ಶ್ರೀ ಬಿ. ಲಕ್ಕಪ್ಪ.—ನಿಮ್ಮಂತಹವರು ಇರುವವರೆಗೆ ಅದಕ್ಕೆ ಶಕ್ತಿ ಎಲ್ಲಿಂದ ಬರಬೇಕು.

ಶ್ರೀ ಬಿ. ಮಲಪ್ಪ.—ದೇವರಿಗೆ ಈ ಗತಿಯನ್ನು ತಂದವರೇ ಅವರು.

ಶ್ರೀ ಡಿ. ಟಿ. ಜಯಕುಮಾರ್.—ಅಧ್ಯಕ್ಷರೇ, ದೇವಸ್ಥಾನದ ಒಡವೆಗಳು .....

ಅಧ್ಯಕ್ಷರು.—ಅವರು ಉತ್ತರ ಹೇಳಲಿ ತಡೆಯಿರಿ. ಆಮೇಲೆ ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೇ, ನಾನು ಮಂತ್ರಿಗಳಿಗೆ ಉತ್ತರ ಹೇಳುವುದಕ್ಕೆ ಕೇಳುತ್ತಿದ್ದೇನೆ. ಯಾರ್ಯಾರೋ ಏನೇನೋ ಹೇಳುತ್ತಿದ್ದಾರೆ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ, ಅವಕಾಶ ಕೊಡುತ್ತೇನೆ. ಮಾನ್ಯ ಮಂತ್ರಿಗಳು ಉತ್ತರ ಹೇಳಲಿ.

ಶ್ರೀ ಕೆ. ಅಮರ್‌ನಾಥ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಈ ಮುಜರಾಯಿ ದೇವಸ್ಥಾನಗಳ ಒಡವೆಗಳನ್ನು ಟ್ರೆಜರಿಯಲ್ಲಿ ಇಡತಕ್ಕಂಥ ಕ್ರಮ ಇರಲಿಲ್ಲ. ಅದನ್ನು ಕನ್‌ವೀನರ್ ಕೈಯಲ್ಲಿ ಕೊಡುತ್ತಿದ್ದೆವು. ಆದರೆ ಇನ್ನು ಮುಂದೆ ಎಲ್ಲಾ ದೇವಸ್ಥಾನಗಳ ಒಡವೆಗಳು ಏನು ಇವೆ, ಅದನ್ನು ಟ್ರೆಜರಿಯಲ್ಲಿ ಇಡಬೇಕು ಎಂದು ಆದೇಶವನ್ನು ನೀಡಿದ್ದೇನೆ. ಇಲ್ಲಿ ಆಗಿರತಕ್ಕಂಥ ಈ ತೊಂದರೆಗಳ ಬಗ್ಗೆ ನಾನು ತಹಶೀಲ್ದಾರ್‌ರವರಿಂದ ರಿಪೋರ್ಟ್‌ನ್ನು ತರಿಸಿದ್ದೇನೆ. ಅವರನ್ನು ಕೂಡಲೇ ಪೋಲೀಸ್‌ಗೆ ಹ್ಯಾಂಡ್‌ಓವರ್ ಮಾಡಿ ಎಂದು ಹೇಳಿದ್ದೇನೆ. ಈಗ ಇರತಕ್ಕಂಥ ಕನ್‌ವೀನರ್ ಮಾತ್ರ ಅಲ್ಲ. ಹಿಂದೆ ಇದ್ದಂಥ ಕನ್‌ವೀನರ್ ಕೂಡಾ ಇದರಲ್ಲಿ ಶಾಮೀಲಾಗಿದ್ದಾರೆ ಎನ್ನತಕ್ಕಂಥ ಒಂದು ಸಂಶಯದಿಂದ ಇಷ್ಟು ಸಮಯ ಇದಕ್ಕೆ ತೆಗೆದುಕೊಳ್ಳಬೇಕಾಯಿತು. ಈಗ ಕನ್‌ವೀನರ್‌ನ್ನು ಕೂಡಲೇ ಪೋಲೀಸ್‌ಗೆ ಹ್ಯಾಂಡ್‌ಓವರ್ ಮಾಡಲಿಕ್ಕೆ ಆದೇಶವನ್ನು ಕೊಟ್ಟಿದ್ದೇನೆ.

ಶ್ರೀ ಬಿ. ಲಕ್ಕಪ್ಪ.—ಈಗಾಗಲೇ ಏನೇ ತಾರೀಖು ಹೋಗಿ ನೋಡಿದ್ದೇನೆ. ಅಲ್ಲಿ ಅನ್ಯಾಯ ಆಗಿರತಕ್ಕಂಥದ್ದು ಅಧಿಕಾರಿಗಳ ಗಮನಕ್ಕೆ ಬಂದಿದೆಯೇ? ಇದರ ಬಗ್ಗೆ ಇದುವರೆಗೂ ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ? ಆದಷ್ಟು ಬೇಗ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ ಎಂದು. ಮಾನ್ಯ ಮಂತ್ರಿಗಳೇ ಹೇಳಲಿ.

ಅಧ್ಯಕ್ಷರು.—ಆದಷ್ಟು ಬೇಗ ಎಂದು ಹೇಳಿ.

ಶ್ರೀ ಕೆ. ಅಮರ್‌ನಾಥಶೆಟ್ಟಿ.—ಆದಷ್ಟು ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಅಧ್ಯಕ್ಷರೇ, ಈ ಪದವನ್ನು ಪದೇಪದೇ ತಾವು ಹೇಳಿಕೊಡಬಾರದು.

(ಗೊಂದಲ)

ಶ್ರೀ ಸಿ. ಟಿ. ಜಯಕುಮಾರ್.—ಇದನ್ನು ದೇವರಿಗೆ ಬಿಟ್ಟುಬಿಡಿ. ದೇವರೇ ನೋಡಿ ಕೊಳ್ಳುತ್ತಾನೆ.

ಅಧ್ಯಕ್ಷರು.—ಈಗ ನಿಯಮ ೫೫ಳಿ.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟ ಮಂತ್ರಿಗಳೇ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಇದು ಬಹಳ ಮುಖ್ಯವಾದುದು.

ಅಧ್ಯಕ್ಷರು.—ಇದನ್ನು ಬೊಮ್ಮಾಯಿಯವರಿಗೆ ಕೇಳಿ ನಾಳೆ ಹಾಕಿಸುತ್ತೇನೆ. I do agree with you. ನಿಮಗೆ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನನ್ನೆ ಹಾಕಿದ್ದುದು ಇವತ್ತು ಬರುತ್ತದೆ ಎಂದೂ ಹೇಳಿದ್ದೀರಿ

ಅಧ್ಯಕ್ಷರು.—ಇನ್ನು ಇದಕ್ಕೆ ಬರಬೇಕಾದಂಥ ಮಾಹಿತಿ ಮಹತ್ವದ್ದು ಇದೆ. ಕೆಲವು ಮಾಹಿತಿ ಬಂದಮೇಲೆ ಉತ್ತರವನ್ನು ಕೊಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದನ್ನು ಎಲ್ಲರೂ ಕೂಡಾ ವಿಸಿಟ್ ಮಾಡಿದ್ದಾರೆ. ಇದು ಹೋಂ ಮಿನಿಸ್ಟರ್‌ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟಿರತಕ್ಕಂಥದ್ದು.

(ಗೊಂದಲ)

ಅಧ್ಯಕ್ಷರು.—ನಿಮ್ಮ ಸಮಾಧಾನದಲ್ಲಿ ಉತ್ತರವನ್ನು ಕೊಡುತ್ತೇನೆ ಎಂದು ಮಂತ್ರಿಗಳ ಕೈಯಲ್ಲಿ ಹೇಳಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಿನ್ನೆ ನೀವೇ ಹೇಳಿದ್ದುದು. ನಿಮ್ಮ ಆದೇಶಕ್ಕೆ ಈ ಪರಿಸ್ಥಿತಿ ಒದಗಿದರೆ ಏನು ಹೇಳುವುದು. ಇದನ್ನು ಅಜೆಂಡಾದಲ್ಲಿ ಹಾಕಲೇಬಾರದಾಗಿತ್ತು.

ಅಧ್ಯಕ್ಷರು.—ಕೆಲವು ಮಾಹಿತಿ ಬಂದಿಲ್ಲ ಎಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಿಮಗೆ ಯಾವಾಗ ಹೇಳಿದರು ?

(ಗೊಂದಲ)

ಅಧ್ಯಕ್ಷರು.—ವೆಂಕಟರಾಮಯ್ಯನವರೇ, ೩೩ಳ ನಿಯಮದ ಪ್ರಕಾರ ಕೇಳಿ

ನಿಯಮ ೩೩ಳರ ಮೇರೆಗೆ

೧) ಬೆಂಗಳೂರಿನ ಹತ್ತಿರವಿರುವ ಬಿ. ನಾರಾಯಣಪುರದಲ್ಲಿ ನೀರಿನ ಟ್ಯಾಂಕ್ ಕುಸಿದು ಬಿದ್ದು ಮೂರು ಜನರು ಸತ್ತಿರುವುದು.

SRI R. VENKATARAMAIAH (Mulbagil).— On 30-5-88 at B. Narayanapura in Bangalore behind the Tin Factory due to defective construction of the tank by private party Narayana Reddy a drinking water tank came down killing three persons, Laxmi 22 years 5 months pregnant lady, Seena a boy of 11 years, Mohan a boy of 8 years and five more are injured admitted to Bowring & I. T. I. Hospital There is a ghastly accident due to negligent construction of a water tank. The injured and the dead are belong to poor families. They need compensation and the persons responsible for this ghastly accident punished suitably.

Hence, we call up on the Hon'ble Minister for H. U. D. to reply in this regard

ಶ್ರೀ ವೀರಣ್ಣ (ಸಣ್ಣ ಉಳಿತಾಯ ಖಾತೆ ಸಚಿವರು) (ಮಾನ್ಯ ವಸತಿ ಮತ್ತು ನಗರಾಭಿ ವೃದ್ಧಿ ಖಾತೆ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ೩೦.೫.೮೮ರಂದು ಬೆಂಧ್ಯಾಹ್ನ ಸುಮಾರು ೪.೪೫ಕ್ಕೆ ಬಿ. ನಾರಾಯಣಸ್ವಾಮಿ ಎಂಬುವರ ಜಮೀನಿನಲ್ಲಿ ಕಟ್ಟಲಾಗಿದ್ದ ಹೊಸ ನೀರಿನ ಕೊಳ ಒಡೆದಿದ್ದರ ಪರಿಣಾಮವಾಗಿ ೩ ಜನರು ಸತ್ತು, ಇನ್ನೂ ೩ ಜನರಿಗೆ ಗಾಯವಾಗಿರುವ ಘಟನೆ ಪರದಿಯಾಗಿದೆ.

ಸತ್ತವರು :

೧) ಸುನಿಲ್, ತಂದೆ ನಾರಾಯಣ್, ವಯಸ್ಸು ೧೦ ವರ್ಷ

೨) ಧನಲಕ್ಷ್ಮಿ, ದನಂಜಯರವರ ಪತ್ನಿ ವಯಸ್ಸು ೧೮ ವರ್ಷ

೩) ಮೋಹನ್ ಕುಮಾರ್, ತಂದೆ ದಾಸಪ್ಪ, ವಯಸ್ಸು ೭ ವರ್ಷ

ಗಾಯಗೊಂಡವರು :

೧) ನಾರಾಯಣ, ೪೫ ವರ್ಷ (ಸುನಿಲ್ ತಂದೆ), ಐ. ಟಿ. ಐ. ಕಾರ್ಖಾನೆಯ ನೌಕರ,

೨) ಶೊಬಿನ್, ಷಾನವಾಜ್‌ರವರ ಮಗ, ವಯಸ್ಸು ೧೩ ವರ್ಷ,

೩) ಆಯಿಷಾಬಾನು, ಷಾನವಾಜ್‌ರವರ ಮಗಳು, ವಯಸ್ಸು ೮ ವರ್ಷ

೨. ಬಿ. ನಾರಾಯಣಪುರದಲ್ಲಿ ವ್ಯಾಪಾರ ಮಾಡಿಕೊಂಡಿರುವ ನಾರಾಯಣಸ್ವಾಮಿ ತಂದೆ ಮುನಿಯಪ್ಪ (೫೫ ವರ್ಷ) ಎನ್ನುವವರು ಇತ್ತೀಚೆಗೆ ತಮ್ಮ ಜಮೀನಿನಲ್ಲಿ ಒಂದು ಕೊಳವನ್ನು ಕಟ್ಟಿಸಿ ಸದರಿ ಕೊಳದಿಂದ ಸುಮಾರು ೨೦ ಅಡಿಗಳ ದೂರದಲ್ಲಿ ಕೊಳವೆ ಬಾವಿಯಿಂದ ನೀರನ್ನು ಸಂಗ್ರಹಿಸಿ ಆ ಸ್ಥಳದ ಜನರಿಗೆ ನೀರನ್ನು ಕೊಡುತ್ತಿದ್ದರೆಂದೂ, ಆ ರೀತಿ ನೀರನ್ನು ಪಡೆಯಲು ಮೇಲೆ ಸೂಚಿಸಿದವರು